ದಿನಾಂಕ : 11-08-2026 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

**ಪಾಟೀ ಸವಾಲುಃ 1, 2, 5, 6 ಮತ್ತು 9 ನೇ ಆರೋಪಿತರ ಪರ ಶ್ರೀ.ಆರ್.ಸಿ.ಪಿ ವಕೀಲರಿಂದಃ**

5. ಪೋಲಿಸರು ನನಗೆ ಸಾಕ್ಷಿಯಾಗಿ ಬರುವಂತೆ ನೋಟಿಸ ನೀಡಿರಲಿಲ್ಲ, ಆದರೆ ಕರೆದಿದ್ದರು. ಪೋಲಿಸರಿಗೆ ಪಂಚನಾಮೆಯನ್ನು ಬರೆಯಲು ನಾನು ಮಾಹಿತಿಯನ್ನು ನೀಡಿದ್ದೇನೆ. ಮೊದಲು ಟೇಲರ ಅಂಗಡಿಯ ಹತ್ತಿರ ಪಂಚನಾಮೆ ಮಾಡಿದರು ನಂತರ ಪಾನ ಶಾಪ್ ಅಂಗಡಿಯ ಹತ್ತಿರ ಪಂಚನಾಮೆ ಮಾಡಿದರು. ನಾನು ಚೌಗಲಾ ಅವರು ನಡೆಸುತ್ತಿದ್ದ ಚಿಟ್ ಫಂಡ್‌ನಲ್ಲಿ ಕೆಲಸ ಮಾಡುತ್ತಿದ್ದೇನು ಎನ್ನುವುದು ಸರಿಯಲ್ಲ. ಎರಡೂ ಪಂಚನಾಮೆ ಮಾಡಿದ ಸ್ಥಳದ ಚೆಕಬಂದಿಯನ್ನು ನಾನು ಹೇಳಿದ್ದೇನೆ. ಅದನ್ನು ಬಿಟ್ಟು ನಾನು ಬೇರೆ ಮಾಹಿತಿ ಹೇಳಿರುವುದಿಲ್ಲ.

6. ಪಂಚನಾಮೆ ಮಾಡಿದ ಸ್ಥಳದಲ್ಲಿ ನಾವು 3 ಜನ ಮತ್ತು ದಾರಿಯಲ್ಲಿ ಓಡಾಡುತ್ತಿದ್ದ 4-5 ಜನ ಇದ್ದರು. ಅವರು ನಮ್ಮೂರಿನವರೇ ಇದ್ದರು. ಈಗ ಬಹಳ ವರ್ಷಗಳಾಗಿರುವುದರಿಂದ ಅವರ ಹೆಸರುಗಳು ನನಗೆ ನೆನಪಾಗುತ್ತಿಲ್ಲ.

7. ಪೋಲಿಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ ಎನ್ನುವುದು ಸರಿಯಲ್ಲ. ಪಂಚನಾಮೆಯನ್ನು ಸೃಷ್ಟಿ ಮಾಡಲಾಗಿದೆ ಎನ್ನುವುದು ಸರಿಯಲ್ಲ.

**ಪಾಟೀ ಸವಾಲುಃ 4, 8, 10 ಮತ್ತು 11 ನೇ ಆರೋಪಿತರ ಪರ ಶ್ರೀ.ಯು.ಬಿ.ಜೆ ವಕೀಲರಿಂದಃ**

8. ನಾನು 3ನೇ ತರಗತಿಯವರೆಗೆ ಓದಿದ್ದೇನೆ. ನನಗೆ ಓದಲು ಬರೆಯಲು

ಬರುವುದಿಲ್ಲ. ಪೋಲಿಸರು ಪಂಚನಾಮೆ ಮಾಡಿದಾಗ ಬೆಳಗ್ಗೆ 9:00 ಗಂಟೆ ಸಮಯ ಆಗಿತ್ತು. ನಾನು ದಾರಿಯಲ್ಲಿ ಹೋಗುವಾಗ ಪೋಲಿಸರು ನನ್ನನ್ನು ಪಂಚನಾಮೆ ಮಾಡಲು ಕರೆದಿದ್ದಾರೆ. ಪೋಲಿಸರು ನಾವು ಪಂಚನಾಮೆ ಮಾಡಿದ್ದೇವೆ ನೀವು ಸಹಿ ಮಾತ್ರ ಮಾಡಿ ಎಂದು ಹೇಳಿ ನನ್ನ ಸಹಿ ಮಾಡಿಸಿಕೊಂಡಿದ್ದಾರೆ ಎನ್ನುವುದು ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನನ್ನು ಪೋಲಿಸರು ಕೇಳಿ ಬರೆದುಕೊಂಡಿದ್ದಾರೆ ಎಂದು ಹೇಳಿದ್ದಾರೆ. ಪಂಚನಾಮೆಯನ್ನು ಸುಮಾರು ಒಂದು ಗಂಟೆಯವರೆಗೆ ಬರೆದಿದ್ದಾರೆ.

9. ಕಾಂಪ್ಲೇಕ್ಸನ ಮಾಲೀಕರು ಯಾರು ಎಂದು ಪೋಲಿಸರು ನನ್ನನ್ನು ವಿಚಾರಿಸಿದ್ದಾರೆ, ನಾನು ಕೇಶವ ಮಾವರಕರ ಎಂದು ಹೇಳಿದ್ದೇನೆ. ಕಾಂಪ್ಲೇಕ್ಸನ ಮಾಲೀಕರನ್ನು ಪೋಲಿಸರು ಕರೆಸಿರುವುದಿಲ್ಲ. ಯಾವುದೂ ಕಾಂಪ್ಲೇಕ್ಸ ಇಲ್ಲ, ಅಲ್ಲಿ ಕೇಶವ ಮಾವರಕರ ಅವರ ಮನೆ ಮಾತ್ರ ಇವೆ ಎನ್ನುವುದು ಸರಿಯಲ್ಲ. ಕುಡಚಿ ಪೋಲಿಸ ಠಾಣೆ ಎದುರಿಗೆ ಇದ್ದ ಕಾಂಪ್ಲೇಕ್ಸನ ಹತ್ತಿರ ಪೋಟೋ ತೆಗೆಯಲಾಗಿದೆ ಎನ್ನುವುದು ಸರಿಯಲ್ಲ. ಕೇಶವ ಮಾವರಕರ ಅವರಿಗೆ ಕಾಂಪ್ಲೇಕ್ಸ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಪ್ರಭಾಕರ ಅಸೋದೆ ಅವರಿಗೆ ಸೇರಿದ ಯಾವುದೇ ಅಂಗಡಿಗಳು ಇಲ್ಲಿ ಇರಲಿಲ್ಲ ಎನ್ನುವುದು ಸರಿಯಲ್ಲ.

10. ಕಾಂಪ್ಲೇಕ್ಸನಲ್ಲಿ ಟೇಲರಿಂಗ್ ಅಂಗಡಿ ಇದೆ. ಅದರಿಂದ 300 ಅಡಿ ದೂರದಲ್ಲಿ ಪಾನಶಾಪ್ ಇದೆ. ನಾನು ಹೇಳಿದಂತಹ ಕಾಂಪ್ಲೇಕ್ಸನಲ್ಲಿ ಟೇಲರಿಂಗ್ ಅಂಗಡಿ ಇಲ್ಲ ಮತ್ತು ಪಾನಶಾಪ್ ಇಲ್ಲ ಎನ್ನುವುದು ಸರಿಯಲ್ಲ.

**ಪಾಟೀ ಸವಾಲುಃ 3 ಮತ್ತು 7 ನೇ ಆರೋಪಿತರ ಪರ ಶ್ರೀ.ಎಸ್.ಸಿ.ಜೆ ವಕೀಲರಿಂದಃ**

11. ನಾನು ಪೋಲಿಸ ಠಾಣೆಯಲ್ಲಿ ಸಹಿ ಮಾಡಿರುವುದಿಲ್ಲ, ಪಾನಶಾಪ್ ಹತ್ತಿರ ಸಹಿ ಮಾಡಿರುತ್ತೇನೆ. ನಾನು ಪೋಲಿಸ ಠಾಣೆಗೆ ಹೋಗಿರುವುದಿಲ್ಲ. ನಾನು ದಾರಿಯಲ್ಲಿ ಹೋಗುತ್ತಿದ್ದಾಗ ಪೋಲಿಸರು ಕರೆದಿರುತ್ತಾರೆ. ಪೋಲಿಸರು ಪಂಚನಾಮೆಗೆ ಕರೆದಿದ್ದ ಕಾರಣ ನಾನು  ಸಾಕ್ಷಿಯಾಗಿ ಹೋಗಿದ್ದೇನೆ. ನಾನು ಸ್ಥಳಕ್ಕೆ ಹೋದ ನಂತರ ಅಂಗಡಿಯನ್ನು ತೆಗೆಯಲಾಯಿತು. ಅಂಗಡಿಯ ಮುಂದೆ ಹೆಸರುಗಳನ್ನು ಬರೆದಿಲ್ಲ ಎನ್ನುವುದು ಸರಿ. ಅಸೋದೆ ಕುಟುಂಬದವರು ನನಗೆ ದೂರದ ಸಂಬಂಧಿಕರು.

12. ಅಸೋದೆ ಕುಟುಂಬದವರು ನನಗೆ ದೂರದ ಸಂಬಂಧಿಕರು ಆಗಿರುವುದರಿಂದ ಪೋಲಿಸರು ನನ್ನ ಸಮಕ್ಷಮ ಪಂಚನಾಮೆ ಮಾಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಪೋಲಿಸರು ನನ್ನ ಸಮಕ್ಷಮ ಪಂಚನಾಮೆ ಮಾಡಿಲ್ಲ, ನಾನು ಸಾಕ್ಷಿಯಾಗಿ ಹೋಗಿಲ್ಲ ಎನ್ನುವುದು ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಬೆಳಗಾವಿ.